ಕೇಂದ್ರವಾಗಿದ್ದು, ಈ ಸ್ಥಳದ ಸುತ್ತ-ಮುತ್ತ 8-10 ಕಿ.ಮೀ. ವ್ಯಾಪ್ತಿಯಲ್ಲಿ ಯಾವುದೇ ಆರಕ್ಷಕ ಠಾಣೆ ಇಲ್ಲದಿರುವುದರಿಂದ ಇಲ್ಲಿ ಒಂದು ಆರಕ್ಷಕ ಠಾಣೆಯನ್ನು ತೆರೆಯಬೇಕೆಂದು ಒತ್ತಾಯಿಸಿದ್ದಾರೆ.

ಈ ಪ್ರಸ್ತಾವನೆಯನ್ನು ಬೆಂಗಳೂರು ವಿಭಾಗದ ಡಿ.ಐ.ಜಿ. ಯವರು ಪರಿಶೀಲಿಸಿದ್ದು, ಈ ಸಲಹೆಯನ್ನು ಒಪ್ಪುವುದು ಅಗತ್ಯವಾಗಿದೆಯೆಂದೂ, ಗುಬ್ಬಿ ಮತ್ತು ಚೇಳೂರು ಮತ್ತು ಕಡಬ ಔಟ್‌ಪೋಸ್ಟ್ ಸ್ಟೇಷನ್‌ಗಳ ವ್ಯಾಪ್ತಿಯಿಂದ ತಲಾ 23, 37 ಮತ್ತು 50 ಗ್ರಾಮಗಳನ್ನು ಒಟ್ಟಗೂಡಿಸಿ 20 ಕಿ.ಮೀ. ವ್ಯಾಪ್ತಿಯ 110 ಗ್ರಾಮಗಳ ಜ್ಯೂರಿಸ್‌ಡಿಕ್ಷನ್ ಗೊತ್ತುಪಡಿಸಿ ನಿಟ್ಟೂರು ಗ್ರಾಮದಲ್ಲಿ ಒಂದು ಠಾಣೆಯನ್ನು ತೆಗೆಯುವುದು ಯೋಗ್ಯವೆಂದು ಶಿಫಾರಸ್ಸು ಮಾಡಿದ್ದಾರೆ.

ಮುಂದಿನ ವರ್ಷಗಳಲ್ಲಿ 40 ಪೋಲೀಸ್ ಠಾಣೆಗಳನ್ನು ತೆರೆಯುವ ಯೋಜನೆಯೊಂದನ್ನು ಸರ್ಕಾರ ಈಗಾಗಲೇ ಪರಿಶೀಲಿಸುತ್ತಿದೆ. ನಿಟ್ಟೂರು ಗ್ರಾಮದ ಆವಶ್ಯಕತೆಯನ್ನೂ ಗಮನದಲ್ಲಿಟ್ಟುಕೊಂಡು, ಈ ಪ್ರಸ್ತಾವನೆಯನ್ನು ಮಂಜೂರಾತಿಗಾಗಿ ಪರಿಶೀಲಿಸಲಾಗುವುದು.

ಹಿಂದುಳಿದ ವರ್ಗಗಳ ಇಲಾಖೆಯವರಿಂದ ನಡೆಸುತ್ತಿರುವ ಹಾಸ್ಟೆಲ್‌ಗಳ ವಿದ್ಯಾರ್ಥಿಗಳಿಗೆ ಹಸಿರುಕಾರ್ಡ್ ಮೂಲಕ ಆಹಾರ ಪದಾರ್ಥಗಳನ್ನು ಒದಗಿಸುವುದು.

ಶ್ರೀ ಕೆ.ಎಚ್. ಹನುಮೇಗೌಡ (ಹಾಸನ) : ಸನ್ಮಾನ್ಯ ಉಪಾಧ್ಯಕ್ಷರೆ, ಇತ್ತೀಚಿನ ದಿನಗಳಲ್ಲಿ ಆಹಾರ ಪದಾರ್ಥಗಳ ಧಾರಣೆಯು ವಿಪರೀತ ಏರಿದ್ದು ಸರ್ಕಾರ ನಡೆಸುತ್ತಿರುವ ಪದವಿಪೂರ್ವ ಮತ್ತು ಪ್ರೌಢಶಾಲೆಗಳ ವಿದ್ಯಾರ್ಥಿನಿಲಯಗಳ ವಿದ್ಯಾರ್ಥಿಗಳ ಊಟ, ತಿಂಡಿ ವಗೈರೆಗೆ ಕೊಡುತ್ತಿರುವ ಹಣ ಬಹಳ ಕಡಿಮೆ ಇದೆ. ಸಮಾಜ ಕಲ್ಯಾಣ ಇಲಾಖೆಯವರು ನಡೆಸುತ್ತಿರುವ ಹಾಸ್ಟೆಲುಗಳ ವಿದ್ಯಾರ್ಥಿಗಳಿಗೆ ಹಸಿರು ಕಾರ್ಡ್‌ನ ಮೂಲಕ ಆಹಾರಧಾನ್ಯಗಳನ್ನು ಒದಗಿಸುತ್ತಿರುವಂತೆ ಹಿಂದುಳಿದ ವರ್ಗಗಳ ಇಲಾಖೆಯವರಿಂದ ನಡೆಸುತ್ತಿರುವ ಹಾಸ್ಟೆಲುಗಳ ವಿದ್ಯಾರ್ಥಿಗಳಿಗೂ ಹಸಿರು ಕಾರ್ಡ್ ಮೂಲಕ ಆಹಾರ ಪದಾರ್ಥಗಳನ್ನು ಒದಗಿಸುವಂತೆ ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಸಚಿವರ ಗಮನಕ್ಕೆ ತರಬಯಸುತ್ತೇನೆ.

ಸನ್ಮಾನ್ಯ ಉಪಾಧ್ಯಕ್ಷರೆ, ಕೆಲವು ಹಾಸ್ಟೆಲ್‌ಗಳಲ್ಲಿ ಕಾಫಿ ನಿಲ್ಲಿಸಿಬಿಟ್ಟಿದ್ದಾರೆ. ಊಟ ನಿಲ್ಲಿಸಿಬಿಟ್ಟಿದ್ದಾರೆ. ಇನ್ನು ಕೆಲವು ಹಾಸ್ಟೆಲ್‌ಗಳಲ್ಲಿ ಮಕ್ಕಳಿಗೆ ಕೊಡತಕ್ಕ ಆಹಾರ ಹೊಟ್ಟೆ ತುಂಬುವುದಿಲ್ಲ ಎಂದು ಹೇಳಿದರು. ದುಡ್ಡು ಜಾಸ್ತಿ ಮಾಡಬೇಕು. ಇಲ್ಲವೇ ಕಡಿಮೆ ರೇಟ್‌ನಲ್ಲಿ ಆಹಾರಧಾನ್ಯಗಳನ್ನು ಒದಗಿಸುವುದಕ್ಕೆ ಸರ್ಕಾರ ಏರ್ಪಾಡು ಮಾಡಬೇಕು. ಇಲ್ಲದೇ ಇದ್ದರೆ ನಿರ್ಭಾಗ್ಯ ಮಕ್ಕಳಿಗೆ ತೊಂದರೆಯಾಗುತ್ತದೆ.

ಶ್ರೀ ಎಂ. ಬ್ಲೇಸಿಯಸ್ ಡಿಸೌಜ (ಕಾನೂನು ಮಂತ್ರಿಗಳು) : ಮಾನ್ಯ ಉಪಾಧ್ಯಕ್ಷರೆ, ಸಂಬಂಧಪಟ್ಟ ಮಂತ್ರಿಗಳಿಗೆ ತಿಳಿಸಿ ಉತ್ತರ ತರಿಸಿಕೊಡುತ್ತೇನೆ.

ಶ್ರೀ ಕೆ.ಎಚ್. ಹನುಮೇಗೌಡ : ಏನು ಸ್ವಾಮಿ? ನೀವು ವ್ಯವಸ್ಥೆ ಮಾಡಿಸಿ. ಉತ್ತರ ಕೊಡದಿದ್ದರೂ ಚಿಂತೆ ಇಲ್ಲ. ಮಕ್ಕಳ ಮೇಲೆ ಕನಿಕರ ಇಟ್ಟಕೊಂಡು ಮಕ್ಕಳಿಗೆ ಹೊಟ್ಟೆತುಂಬ ಊಟ, ತಿಂಡಿ ಕೊಡುವ ವ್ಯವಸ್ಥೆ ಮಾಡಿ.